2-00 P.M

REDUCTION OF AMOUNT UNDER COMMUNICATION AND BUILDINGS

481 SRI K. H. RANGANATH (Mudigere). —Will the Minister for Finance, Planning and Youth Welfare be pleased to state:—

(*a*) whether the Resources Committee has recommended reduction in the amount proposed in the Budget Estimate for 1969-70 under Communication and Building and if so the total amount so recommende

(b) whether the said recommendation has been accepted by the Government and the proposed cut that is being resorted to (Circle wise Gistrict wiseres may be furnished)?

SRI RAMAKRISHNA HEGDE:—(Minister for Finance, Planning and Youth Welfare)

(*a*) Yes.

Rs·1 50 lakhs

(*b*) The saving is anticipated by deferring fresh works which have not beeu taken up or works although sanctioned have not been started and alsoby reducing the expenditure under Tools and Plant The actual savings are to be effected in consultation with the concerned Department. No. breakup can be given.

ಶ್ರೀ ಕೆ. ಎಚ್. ರಂಗನಾಥ್:—ತಾವು (ಅ) ಉತ್ತರದಲ್ಲಿ ಹೊಸ ಕಾಮಗಾರಿಗಳನ್ನು ಅಥವಾ ಕಾಮಗಾರಿಗಳು ಮಂಜೂರಾಗಿ ದ್ದೂ ಪ್ರಾರಂಭಿಸದಿರುವ ಕಾಮಗಾರಿಗಳನ್ನೂ ಮುಂದೂಡುವ ಮೂಲಕ ಹಾಗೂ ಯಂತ್ರೋಪಕರಣಗಳ ಬಾಬಿನಲ್ಲಿ ವೆಚ್ಚವನ್ನು ಕಡಿಮೆಗೊಳಿಸುವುದರ ಮೂಲಕ ಉಳಿತಾಯವನ್ನು ನಿರೀಕ್ಷಿಸಲಾಗಿದೆ, ಸಂಬಂಧಪಟ್ಟ ಇಲಾಖೆಯೊಡನೆ ಸಮಾಲೋಚಿಸಿ ವಾಸ್ತವವಾಗಿ ಉಳಿತಾಯ ಮಾಡ ಬೇಕಾಗಿದೆ. ಪ್ರತ್ಯೇಕ ಅಂಕಿ ಅಂಶಗಳನ್ನು ಒದಗಿಸುವುದು ಸಾಧ್ಯವಿಲ್ಲವೆಂದು ಹೇಳಿದ್ದೀರಿ ಆದ್ದರಿಂದ ಸರ್ಕಲ್‌ವೈಸ್, ಜಿಲ್ಲಾವೈಸ್ ಬ್ರೇಕ್ ಅಪ್ ಕೊಡುವುದಕ್ಕೆ ಸರ್ಕಾರಕ್ಕೆ ಇರುವ ಕಷ್ಟವೇನು?

ಶ್ರೀ ರಾಮಕೃಷ್ಣ ಹೆಗಡೆ:— ಕಷ್ಟಸ್ಪಷ್ಟವಾಗಿದೆ. ಈಗ ಬಡ್ಜೆಟ್ಟಿನಲ್ಲಿ ಸೇರಿಸಿರತಕ್ಕಂತಹ ಕೆಲಸಗಳಲ್ಲಿ ಯಾವುದು ಇದುವರೆಗೂ ಅಪ್ರೂವ್ ಆಗಿಲವೋ ಅದನ್ನು ತಡೆಹಿಡಿಯುತ್ತೇವೆ· ಮತ್ತು ಪ್ಲಾಂಟ್ಸ್ ಅಂಡ್ ಮ್ಯಾಶಿನರಿಗೆ ಖರ್ಚು ಮಾಡತಕ್ಕ ಹಣ ನಿಗದಿ ಮಾಡಿ ಖರ್ಚು ಮಾಡುವುದಿಲ್ಲ. ಹೀಗೆ ಒಂದು-ಒಂದೂವರೆ ಕೋಟಿ ರೂಪಾಯಿ ಉಳಿತಾಯ ಆಗುತ್ತದೆ. ಮತ್ತು ಸರ್ಕಲ್‌ವೈಸ್, ಜಿಲ್ಲಾವೈಸ್ ಬ್ರೇಕ್ ಅಪ್ಸ್ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ದೇವೆಗೌಡ —ಪ್ಲಾಂಟ್ಸ್ ಅಂಡ್ ಮೇಶಿನರಿಗೆ ಖರ್ಚು ಮಾಡತಕ್ಕ ಹಣದಲ್ಲಿ ಕಡಿತ ಮಾಡುವುದರಿಂದ, ಮೇಜರ್ ಇರಿಗೇಶನ್‌ಗೆ ಬೇಕಾದ ಬುಲ್‌ಡೋಸರ್‌ಗಳು, ಸ್ಕ್ರೇಪರ್ಸ್ ಇತ್ಯಾದಿಗಳನ್ನು ಕೊಂಡುಕೊಳ್ಳದಿದ್ದರೆ, ಬಹಳ ತೊಂದರೆಯಾಗುತ್ತದೆ. ಆದ್ದರಿಂದ ನಮ್ಮ ಮೇಜರ್ ಇರಿಗೇಶನ್‌ಗೆ ಪ್ರೋಗ್ರಾಂಗಳು ಕುಂಠಿತವಾಗುವುದಿಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.— ಇದು ಮೇಜರ್ ಇರಿಗೇಶನಿಗೆ ಸಂಬಂಧಪಟ್ಟದ್ದಲ್ಲ. ಇದು ಕೇವಲ ಪಿಡಬ್ಲ್ಯುಡಿ ಯಲ್ಲಿರುವ ರೋಡ್ ಮತ್ತು ಬಿಲ್ಡಿಂಗ್ಸ್ ಅವುಗಳಿಗೆ ಸಂಬಂಧಪಟ್ಟದ್ದು. ಅಲ್ಲಿ ಟ್ರಕ್ ರೋಡ್ ರೋಲರ್ಸ್ ಮುಂತಾದವುಗಳನ್ನು ನಿಲ್ಲಿಸಬೇಕಾಗುತ್ತದೆ. ಮೇಜರ್ ಇರಿಗೇಶನಿಗೆ ಇದು ಆಫೆಕ್ಟ್ ಆಗುವುದಿಲ್ಲ.

ಶ್ರೀ ಕೆ ಎನ್ ವೀರಪ್ಪ ಗೌಡ—. ನೀವು ಒಂದುಸಲ ಎಲ್ಲಾ ಕಡೆಗೂ ಒಂದೇ ತರದ ಅನುಕೂ ಇವತ್ತುಕಲಿಸಬೇಕೆಂದು ಹೇಳುತ್ತಿದಿರಿ ಮಲೆನಾಡಿನಲ್ಲಿ ನೀವು ನೀರು ಕೊಡದೆ, ಅವರು ಆಹಾರಧಾನ್ಯ ಕೊಡುತ್ತಿದ್ದಾಗ ಅಲ್ಲಿ ಆಗತಕ್ಕ ರೋಡುಗಳು ಮತ್ತು ಸಣ್ಣ ಬ್ರಿಜ್‌ಗಳನ್ನು ನಿಲ್ಲಿಸಿ ಯಾವುದೋ ಒಂದು ಏರಿಯಾದ ಅಣೆಕಟ್ಟಿಗೆಹಣವನ್ನು ಹಾಕತಕ್ಕದ್ದು ನ್ಯಾಯವೆ ? ಇದು ಪಕ್ಷಪಾತವಾಗುವುದಿಲ್ಲವೆ? ಇಂದು ಮಲೆನಾಡಿನಲ್ಲಿ ಎಷ್ಟು ಭತ್ತವನ್ನು ಬೆಳೆಯುತ್ತಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ರಾಮಕೃಷ್ಣ ಹೆಗಡೆ,— ಮಾನ್ಯ ಸದಸ್ಯರಿಗೆ ನಾನು ಆಶ್ವಾಸನೆಯನ್ನು ಕೊಡುತ್ತೇನೆ —ಚಿಕ್ಕ ಮಗಳೂರು ಜಿಲ್ಲೆಗೆ ಯಾವುದೇ ಕಡಿತವನ್ನು ಮಾಡಿಲ್ಲ. ಈ ವರ್ಷದಲ್ಲಿ ಆತೀ ಹೆಚ್ಚಿನ ಪ್ರೊವಿಜನ್ ಮಾಡಿದ್ದೇವೆ. ಆದ್ದರಿಂದ ಯಾವುದೇ ವ್ಯಥೆ ಅವರು ಪಡಬೇಕಾಗಿಲ್ಲ.

MINOR IRRIGATION SCHEMES IN DODDABALLAPUR

490 SRI. G. RAME GOWDA. (Doddaballapur):—

Will the Minister of State for Minor Irrigation be pleased to state:—

(*a*) the number of sanctioned works in Doddaballapur Constituency under Minor Irrigation Scheme:

(*b*) the date of sanction and cost ofr estimate of each scheme;

(c) the date of starting of each work and the expenditure incurred on each work;

(*d*) the reasons fo not completing these works (reasons in each case may be given separately)?

SMT. BASAWARAJESAWARI—(Deputy Minister for Social Welfare (on behalf of) SRI A. J. DODDAMETI.—Minister of State for Minor Irrigation.

(*a*) 12.

(*b*), (c) and (*d*) *Vide* statement appended.

* *